

# ಸಹಕಾರಿ ಕೃಷಿಯ ಕನಸುಗಾರ

■ ರಾಘವೇಂದ್ರ ಕೆ.

**ಸಂಪತ್ತಿನ ರಾಷ್ಟ್ರೀಕರಣದ ಮೂಲಕ ದೇಶದಲ್ಲಿ ಆರ್ಥಿಕ ಸಮಾನತೆ ಸಾಧಿಸಲು ಸಾಧ್ಯ ಎನ್ನುವುದನ್ನು ಪ್ರತಿಪಾದಿಸಿದ ಪ್ರಬುದ್ಧ ಅರ್ಥಶಾಸ್ತ್ರಜ್ಞ ಅಂಬೇಡ್ಕರ್ ಅವರ ಚಿಂತನೆಯಲ್ಲಿ ಪ್ರಸಕ್ತ ಸಂದರ್ಭದ ಆರ್ಥಿಕ ಹಿಂಜರಿತಕ್ಕೆ ಉತ್ತರ ಇದ್ದಂತಿದೆ.**

ಈಗ ಕೃಷಿ ಉತ್ಪನ್ನಕ್ಕೆ ಬೆಲೆಯೂ ಇಲ್ಲ, ನೆಲೆಯೂ ಇಲ್ಲ ಎನ್ನುವುದು ನಿತ್ಯದ ವರ್ತಮಾನದ ಸಂಗತಿಯಾಗಿದೆ. ಬೆಳೆದ ಫಸಲಿನ ಸಮಾಧಿ ಮೇಲೆ ಗೋಗರೆದು ಕಣ್ಣೀರು ಕರೆಯುವ ರೈತನ ಕಣ್ಣೀರಿನಲ್ಲಿ ಈ ದೇಶದ ಹಣಕಾಸಿನ ಬಿಂಬ ಕಾಣಿಸುತ್ತಿದೆ. ಆರ್ಥಿಕ ಹಿಂಜರಿತ ಹಾಗೂ ಕೊರೊನಾದಂತಹ ಸಾಂಕ್ರಾಮಿಕ ರೋಗ ದೇಶದ ಹಣಕಾಸಿನ ಸ್ಥಿತಿಗೆ ಪಿಡುಗಾಗಿ ಕಾಡುತ್ತಿವೆ. 'ಆರ್ಥಿಕ ಸುಧಾರಣೆಯಿಂದ ಮಾತ್ರ ಸಾಮಾಜಿಕ ಸಮಾನತೆ ಸಾಧಿಸಲು ಸಾಧ್ಯ' ಎನ್ನುವ ಸರಳ ಸೂತ್ರವನ್ನು ಪ್ರತಿಪಾದಿಸಿದ ಆರ್ಥಿಕ ಚಿಂತಕ ಬಾಬಾಸಾಹೇಬ್ ಅಂಬೇಡ್ಕರ್ ಅವರಲ್ಲಿ ಇಂದಿನ ಸಮಸ್ಯೆಗೆ ಪರಿಹಾರ ಇದೆಯೇ ಎನ್ನುವುದನ್ನು ಈ ಬರಹದ ಮೂಲಕ ಕಾಣುವ ಪ್ರಯತ್ನ ಈ ಕಿರು ಬರಹದ್ದು.

ಭಾರತವನ್ನು ಆರ್ಥಿಕ ಹಿಂಜರಿತ ಕಾಡುತ್ತಿದ್ದ ಹೊತ್ತಿಗೆ ಕೊರೊನಾ ವೈರಸ್ ದೇಶದ ಅರ್ಥವ್ಯವಸ್ಥೆಯನ್ನು ಮತ್ತಷ್ಟು ಹದಗೆಡುವಂತೆ ಮಾಡಿದೆ. ಇಂತಹ ಆರ್ಥಿಕ ಸ್ಥಿತಿಯನ್ನು ಸುಧಾರಿಸಲು ಭಾರತೀಯ ರಿಸರ್ವ್ ಬ್ಯಾಂಕ್

**ಏಪ್ರಿಲ್ 14 ಅಂಬೇಡ್ಕರ್ ಜಯಂತಿ**

ಕೆಲವೊಂದು ಸುಧಾರಣಾ ನೀತಿಗಳನ್ನು ಪ್ರಕಟಿಸಿತು. ರಿಸರ್ವ್ ಬ್ಯಾಂಕ್ ಸಂಸ್ಥಾಪನೆಯ ಹಿಂದೆ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಕನಸಿದೆ. ಅವರು ಸಂವಿಧಾನ, ರಾಜಕೀಯ, ಧರ್ಮಶಾಸ್ತ್ರ, ಸಮಾಜಶಾಸ್ತ್ರ, ನ್ಯಾಯಶಾಸ್ತ್ರವೂ ಸೇರಿದಂತೆ ಅರ್ಥಶಾಸ್ತ್ರದಲ್ಲಿ ಪ್ರಾವೀಣ್ಯವನ್ನು ಸಾಧಿಸಿದ್ದರು.

'ಮೂರ್ಖರ ದಿನ' ಎಂದು ತಮಾಷೆಗೆ ಗುರಿಯಾಗಿರುವ ಏಪ್ರಿಲ್ 1 ಭಾರತದ ರಿಸರ್ವ್ ಬ್ಯಾಂಕ್‌ನ ಸಂಸ್ಥಾಪನಾ ದಿನ ಕೂಡ ಹೌದು. ಸ್ವಾತಂತ್ರ್ಯ ಪೂರ್ವದಲ್ಲಿ, ಅಂದರೆ 1935ರಲ್ಲಿ ಬ್ರಿಟಿಷ್ ಸರ್ಕಾರದ ಮೂಲಕ ಸ್ಥಾಪನೆಯಾದ ರಿಸರ್ವ್ ಬ್ಯಾಂಕ್ ಈಗಲೂ ದೇಶದಲ್ಲಿ ಆರ್ಥಿಕ ಸದೃಢತೆಗೆ ಶ್ರಮಿಸುತ್ತಿದೆ.

## ರಿಸರ್ವ್ ಬ್ಯಾಂಕ್ ಕಥೆ

ರಿಸರ್ವ್ ಬ್ಯಾಂಕ್ ಭಾರತದಲ್ಲಿ ಜನ್ಮ ತಾಳುವುದರ ಹಿಂದೆ ಸ್ವಾರಸ್ಯಕರ ಸಂಗತಿಯೊಂದಿದೆ. ಅಮೆರಿಕದ ಕೊಲಂಬಿಯಾ ವಿಶ್ವವಿದ್ಯಾಲಯದಿಂದ ಪಿಎಚ್.ಡಿ. ಪದವಿ ಪಡೆದು 1917ರಲ್ಲಿ ಭಾರತಕ್ಕೆ ಮರಳಿದ ಅಂಬೇಡ್ಕರ್ ಮುಂಬಯಿಯಲ್ಲಿ ಅಧ್ಯಾಪನ ವೃತ್ತಿ ಆರಂಭಿಸುತ್ತಾರೆ. ಕೆಲವೇ ದಿನಗಳಲ್ಲಿ ಅವರು ಅಧ್ಯಯನಕ್ಕಾಗಿ ಲಂಡನ್ನಿಗೆ ತೆರಳುತ್ತಾರೆ. ಲಂಡನ್ ವಿಶ್ವವಿದ್ಯಾಲಯಕ್ಕೆ 'ಬ್ರಿಟಿಷ್ ಭಾರತದಲ್ಲಿ ಸಾಮ್ರಾಜ್ಯಶಾಹಿ ಹಣಕಾಸಿನ ಪ್ರಾಂತೀಯ ವಿಕೇಂದ್ರೀಕರಣ' ಎಂಬ ಪ್ರೌಢ ಪ್ರಬಂಧವನ್ನು ಸಲ್ಲಿಸಿ, 1921ರಲ್ಲಿ ಅರ್ಥಶಾಸ್ತ್ರದಲ್ಲಿ ಎಂ.ಎಸ್ಸಿ. ಪದವಿಯನ್ನು ಗಳಿಸುತ್ತಾರೆ.

ಅಲ್ಲೇ ಅವರು ಹಣಕಾಸಿಗೆ ಸಂಬಂಧಿಸಿದಂತೆ ಸಂಶೋಧನೆಯನ್ನೂ ಮುಂದುವರೆಸುತ್ತಾರೆ. ಭಾರತೀಯ ಕರೆನ್ಸಿ ಮತ್ತು ಬ್ಯಾಂಕಿಂಗ್ ವ್ಯವಸ್ಥೆಯನ್ನು ಒಳಗೊಂಡಂತೆ ಅಧ್ಯಯನ ನಡೆಸಿ ರೂಪಿಸಿದ ಪ್ರೌಢ ಪ್ರಬಂಧಕ್ಕೆ 'ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್' ಡಾಕ್ಟರ್ ಆಫ್ ಸೈನ್ಸ್ ಪದವಿ ನೀಡುತ್ತದೆ. ಅದು 'ರೂಪಾಯಿ ಸಮಸ್ಯೆ' (ಪ್ರಾಬ್ಲಂ